ವ್ಯತ್ಯಾಸವಿದೆ. ಒಂದಕ್ಕೊಂದು ಅಂಟಿದಂತೆ ಸಾಗುತ್ತಿರುವ ಇಷ್ಟೊಂದು ವಾಹನಗಳ ನಡುವೆ ಒಂದಾದರೂ ಹಾರ್ನ್ ಶಬ್ದ ಕೇಳುತ್ತದೋ ನೋಡು. ಎಂತಹ ಲೇನ್ ಡಿಸಿಪ್ಲೇನ್ ಇದೆ ಗಮನಿಸು. ಯಾವ ದ್ವಿಚಕ್ರ ವಾಹನಗಳೂ ಆಟೋಗಳೂ ನಡುವೆ ತೂರಿಬಂದು ಭಯ ಹುಟ್ಟಿಸುವುದಿಲ್ಲ ಇಲ್ಲಿ. ಬೆಂಗಳೂರಿನ ಟ್ರಾಫಿಕ್ಕಿನಲ್ಲಿ ಸಿಕ್ಕಿಹಾಕಿಕೊಂಡರೆ ಅಲ್ಲಿಯ ಪೀ ಪೀ ಸದ್ದಿಗೆ ತಲೆ ಸಿಡಿದು ಹೋಗುತ್ತದೆ. ಇಲ್ಲಿ ನ್ಯೂಸ್ ಪೇಪರ್ ಓದುತ್ತ ಬೇಕಾದರೂ ಕಾರು ಚಲಾಯಿಸಬಹುದು, ಗೊತ್ತಾ?' ಎಂದ.

★★★

ಭಾರತಕ್ಕೆ ವಾಪಸ್ಸು ಹೋಗುವ ದಿನ ಬಂದಿತ್ತು. ಮಗಳಿಗಾಗಿ ಒಂದು ಆಮೆಯ ಗೊಂಬೆ ಕೊಂಡುಕೊಂಡೆ. ಬೆಳಗಿನಿಂದಲೇ ನನಗೆ ಮನಸ್ಸಿಗೆ ಒಂತರಾ ಕಸಿವಿಸಿ. ಯಾವುದರಲ್ಲೂ ಅಂಥ ಮೂಡಿಲ್ಲ. ಇಷ್ಟು ವರ್ಷ ದುಡಿದ ಮೇಲೆ ಇಂಥದ್ದೊಂದು ಚಾನ್ಸು ಸಿಕ್ಕಿತು, ಅದೂ ಮೋ ಇರದಿದ್ದರೆ ಸಾಧ್ಯವೇ ಆಗುತ್ತಿರಲಿಲ್ಲ. ನಾಳೆಯಿಂದ ಅದೇ ಆಫೀಸು ಅದೇ ಬಾಸು. ಬೆಂಗಳೂರಿಗೆ ಹೋದಮೇಲೆ ಇನ್‌ಬಾಕ್ಸಿನಲ್ಲಿ ಬಿದ್ದಿರುವ ಮುನ್ನೂರು ಇ–ಮೇಲ್‌ಗಳನ್ನು ನೋಡುವುದರಲ್ಲಿಯೇ ಸುಸ್ತು ಹೊಡೆದುಬಿಡುತ್ತದೆ. ನನ್ನ ಎಡಗಣ್ಣಿನ ಬದಿಯ ಹಣೆ ತುಸುವೇ ನೋಯಲು ಶುರುವಾಗುತ್ತ ಇಡೀ ಹಣೆಯನ್ನು ಆವರಿಸತೊಡಗಿತು. ಇನ್ನೊಂದು ವಿದೇಶಿ ಪ್ರಯಾಣಕ್ಕೆ ಇನ್ನೆಷ್ಟು ದಿನ ಕಾಯಬೇಕೋ ಅಂದುಕೊಂಡೆ. ಕೊನೆಯ ದಿನವಾದರೂ ಅಲ್ಲಿಯ ಒಂದೆರಡು ಬೌದ್ಧ ದೇವಾಲಯಗಳನ್ನು ನೋಡಬೇಕೆನ್ನಿಸಿತು. ಏರ್‌ಪೋರ್ಟಿನ ದಾರಿಯಲ್ಲಿಯೇ ಮೋ ಗೋಲ್ಡನ್ ಟೆಂಪಲ್ ಒಂದಕ್ಕೆ ಕರೆದುಕೊಂಡು ಹೋದ. ಅಲ್ಲಿ ದೇವಾಲಯದ ಹೊರಗೆ ಹೂ ಮಾರುವವರು ದೊಡ್ಡ ದೊಡ್ಡ ಬಕೆಟ್ಟುಗಳಲ್ಲಿ ಆಮೆಯ ಮರಿಗಳನ್ನು ಇಟ್ಟುಕೊಂಡಿದ್ದರು. ಅದೇಕೆಂದು ಕೇಳಿದ್ದಕ್ಕೆ ಮೋ ಅಲ್ಲಿಯ ಜನರ ವಿಶಿಷ್ಟ ಪದ್ಧತಿಯ ಬಗ್ಗೆ ತಿಳಿಸಿದ. ಬರುವ ಭಕ್ತಾದಿಗಳಲ್ಲಿ ಕೆಲವರು ಹಣಕೊಟ್ಟು ಆಮೆಯನ್ನು ಖರೀದಿಸಿ ಅದನ್ನು ಅಲ್ಲಿಯೇ ಹತ್ತಿರದ ಕೊಳದಲ್ಲಿ ಬಿಟ್ಟು ಬರುತ್ತಾರೆ. ಈ ರೀತಿ ಆಮೆಯೊಂದನ್ನು ಬಂಧಮುಕ್ತಗೊಳಿಸಿದರೆ ಪುಣ್ಯ ಬರುತ್ತದೆ ಎಂಬುದು ಅವರ ನಂಬಿಕೆ. ಆದರೆ ಇಲ್ಲೊಂದು ಕುತೂಹಲಕಾರಿ ಸಂಗತಿಯಿದೆ. ಕೊಳದಲ್ಲಿ ಆಮೆಯನ್ನು ಬಿಟ್ಟು ಭಕ್ತರು ಅತ್ತ ಹೋಗುತ್ತಿರುವಂತೆ ಅಂಗಡಿಯವರು ಅದೇ ಆಮೆಗಳನ್ನು ಹಿಡಿದು ತಂದು ಮತ್ತೆ ತಮ್ಮ ಬಕೇಟುಗಳಲ್ಲಿ ಇಡುತ್ತಾರೆ. 'ಪಾಪ... ಆಮೆಗಳು, ಇನ್ನೊಬ್ಬ ಶ್ರೀಮಂತ ಹಣ ಕೊಟ್ಟು ಪುಣ್ಯ ಖರೀದಿಸಲು ಬರುವವರೆಗೂ ಕಾಯಬೇಕು' ಎನ್ನುತ್ತ ನಾನು ಮತ್ತು ಮೋ ನಕ್ಕೇ ನಕ್ಕೆವು.

ಏರ್‌ಪೋರ್ಟಿನಲ್ಲಿ ಮೋ–ನನ್ನು ಗಟ್ಟಿಯಾಗಿ ಬಿಗಿದಪ್ಪಿದೆ. 'ಬೆಂಗಳೂರಿಗೆ ಬಂದಾಗ ಫೋನ್ ಮಾಡು' ಎನ್ನುತ್ತಾ ಹೊರಟಾಗ ಮನಸ್ಸು ಭಾರವಾಗಿತ್ತು. ಕೌಂಟರಿನಲ್ಲಿ ಪಾಸ್‌ಪೋರ್ಟಿನ ಮೇಲೆ ಛಪ್ಪೆ ಹೊಡೆದು ಕೈಗಿಟ್ಟ ಥೈ ಮಹಿಳೆಗೆ 'ಖೋಬ್ ಖುನ್‌ಕಾss...' ಎಂದೆ ನಾನು. ಬ್ಯಾಂಕಾಕಿನಲ್ಲಿ ಕಲಿತ ನಾಲ್ಕಾರು ಥೈ ಶಬ್ದಗಳನ್ನು ಇಷ್ಟು ಸಲೀಸಾಗಿ ಉಪಯೋಗಿಸಬಲ್ಲೆನೆಂದು ನನಗೇ ಗೊತ್ತಿರಲಿಲ್ಲ. ಆಕೆ ತಲೆಯೆತ್ತಿ ನನ್ನತ್ತ ನೋಡಿ ಮೋಹಕವಾಗಿ ನಕ್ಕಳು. ಆ ಕ್ಷಣಕ್ಕೆ, ಮೋ– ನ ಚಲಿಂಡಾ ಕೂಡ ಇವಳಂತೇ ಇದ್ದಿರಬಹುದೇ ಎನ್ನಿಸಿತು ನನಗೆ.

**4**

ಅಪ್ಪ ಅಮ್ಮ ಬಾ ಎಂದು ಕರೆಯುತ್ತಿದ್ದರೂ ನಾನು ಊರಿಗೆ ಹೋಗದೇ ಹೆಚ್ಚು ಕಮ್ಮಿ